10	ಚಿಕ್ಕಬಳ್ಳಾಪುರ	4447	6275	3234	13956
11	ಚಿತ್ರದುರ್ಗ	1587	4944	3383	9914
12	ದಾವಣಗೆರೆ	2953	11200	5213	19366
13	ಧಾರವಾಡ	1345	4206	1753	7304
14	ಗದಗ	10774	4458	2113	17345
15	ಗುಲ್ಬರ್ಗಾ	25549	23835	14642	64026
16	ಹಾಸನ	6187	4169	2465	13121
17	ಹಾವೇರಿ	2998	13687	6783	23468
18	ಉತ್ತರ ಕನ್ನಡ	1155	2160	1703	5018
19	ಕೋಲಾರ	7751	4799	2373	14923
20	ಕೊಪ್ಪಳ	2807	7856	3440	14103
21	ಕೊಡಗು	926	1163	769	2858
22	ಮಂಡ್ಯ	9372	4169	4109	17650
23	ದಕ್ಷಿಣ ಕನ್ನಡ	1247	1831	2264	5342
24	ಮೈಸೂರು	14836	10693	6964	32493
25	ರಾಯಚೂರು	14891	11188	5661	31740
26	ರಾಮನಗರ	8378	5090	3424	16892
27	ಶಿವಮೊಗ್ಗ	2430	4972	4204	11606
28	ತುಮಕೂರು	7867	21048	10153	39068
29	ಉಡುಪಿ	227	1476	558	2261
30	ಯಾದಗಿರಿ	3277	4342	1843	9462
ಒಟ್ಟು		**2,42,477**	**2,92,589**	**1,62,786**	**6,97,852**

ಸಮುದಾಯ ಭವನಗಳಿಗೆ ಅನುದಾನ ಬಿಡುಗಡೆ ಮಾಡಿದ ಬಗ್ಗೆ

734 (237) ಶ್ರೀ ರಾಜಶೇಖರ ಬಸವರಾಜ ಪಾಟೀಲ್ : ಮಾನ್ಯ ಸಮಾಜ ಕಲ್ಯಾಣ ಮತ್ತು ಬಂಧೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ರಾಜ್ಯಾದ್ಯಂತ ಡಾ:ಬಿ.ಆರ್. ಅಂಬೇಡ್ಕರ್/ಡಾ: ಬಾಬು ಜಗ ಜೀವನರಾಂ ಸಮುದಾಯ ಭವನಗಳ ನಿರ್ಮಾಣಕ್ಕೆ 91.51 ಕೋಟಿ ರೂ. ಬಿಡುಗಡೆ ಮಾಡಿರುವುದು ನಿಜವೆ;

ಆ) ಹಾಗಾದರೆ ಬಸವ ಕಲ್ಯಾಣ ಮತ್ತು ಹುಮ್ನಾಬಾದ್ ತಾಲ್ಲೂಕಿಗೆ ಎಷ್ಟು ಸಮುದಾಯ ಭವನಗಳನ್ನು ಮಂಜೂರು ಮಾಡಲಾಗಿದೆ;

ಇ) ಮಂಜೂರು ಮಾಡಿರುವ ಸಮುದಾಯ ಭವನಗಳಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ. ಸಮುದಾಯ ಭವನಗಳ ಕಾಮಗಾರಿ ಯಾವ ಹಂತದಲ್ಲಿವೆ; (ಇವುಗಳ ಬಗ್ಗೆ ಪೂರ್ತಿ ಮಾಹಿತಿ ಕೊಡುವುದು)

ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂಧೀಖಾನೆ ಸಚಿವರು) :

ಅ) 2012–13ನೇ ಸಾಲಿನಲ್ಲಿ ರೂ.80.00 ಕೋಟಿ ನಿಗಧಿ ಮಾಡಿದ್ದು ಮೊದಲನೇ ಕಂತಾಗಿ ರೂ.20.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

ಆ) ಹುಮ್ನಾಬಾದ್ ತಾಲ್ಲೂಕಿಗೆ 10 ಸಮುದಾಯ ಭವನಗಳನ್ನು ಮಂಜೂರು ಮಾಡಲಾಗಿದೆ. ಬಸವ ಕಲ್ಯಾಣ ತಾಲ್ಲೂಕಿಗೆ ಮಂಜೂರು ಮಾಡಿರುವುದಿಲ್ಲ.

ಇ) ರೂ.125.00 ಲಕ್ಷಗಳು ಮಂಜೂರಾಗಿದ್ದು. ಈ ಪೈಕಿ ಮೊದಲನೇ ಕಂತಾಗಿ ರೂ.62.50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಮಂಜೂರಾಗಿರುವ 10 ಸಮುದಾಯ ಭವನಗಳಿಗೆ ನಿವೇಶನಗಳನ್ನು ಗುರುತಿಸಿ ತಕ್ಷಣ ಕಾಮಗಾರಿಯನ್ನು ಪ್ರಾರಂಭಿಸಲು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ.

ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿನ ಸಬ್ ಸರ್ವೀಸ್ ಸ್ಟೇಷನ್

720 (19) ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಕಮ್ಮರಡಿ, ಕೋಣಂದೂರು, ಬೆಜ್ಜವಳ್ಳಿ, ಮಂಡಗದ್ದೆ, ನಗರ ಸಂಪೆಕಟ್ಟೆ, ರಿಪ್ಪನ್ ಪೇಟೆಗಳಲ್ಲಿ ವಿದ್ಯುತ್ ಸಬ್ ಸರ್ವೀಸ್ ಸ್ಟೇಷನ್‌ಗಳ ಅಗತ್ಯವಿದ್ದು, ಈ ನಿಟ್ಟಿನಲ್ಲಿ ಸರ್ಕಾರ ಏನು ಕ್ರಮ ಕೈಗೊಂಡಿದೆ;